**ದಿನಾಂಕಃ 27-03-2024 ರಂದು ಮದ್ಯಂತರ ಅರ್ಜಿ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ವಾಯ್.ಎಸ್.ವಾಯ್. ವಕೀಲರಿಂದ :**

ನಾನು 10 ನೇ ತರಗತಿ ವರೆಗೂ ಓದಿರುತ್ತೇನೆ. ನಾನು ಅಂಗನವಾಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಅಂಗನವಾಡಿಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಅಂಗನವಾಡಿ ಸರಕಾರದ ಅಡಿಯಲ್ಲಿ ಬರುತ್ತದೆ, ಆದರೆ ನಾನು ಗುತ್ತಿಗೆ ಆಧಾರ ಮೇಲೆ ಕೆಲಸ ಮಾಡುತ್ತಿದ್ದೇನೆ, ನನಗೆ ಸಂಬಳ ಸರಕಾರ ಕೊಡುತ್ತದೆ. ಸಾಕ್ಷಿಯು ಪುನಃ ನನ್ನ ನೌಕರಿ ಖಾಯಂವಾಗಿ ಅಥವಾ ಗುತ್ತಿಗೆ ಆಧಾರ ಮೇಲೆ ಇರುತ್ತದೆಯೋ ಎಂದು ನನಗೆ ಗೊತ್ತಿರುವುದಿಲ್ಲ.

ನನ್ನ ತಂದೆ ತಾಯಿಗೆ ನಾವು ನಾಲ್ಕು ಜನ ಹೆಣ್ಣು ಮಕ್ಕಳು, ಮೂರು ಜನ ಗಂಡು ಮಕ್ಕಳು ಇರುತ್ತೇವೆ. ನನ್ನ ಅಕ್ಕತಂಗಿಯರ ಹೆಸರು ಶರಣಮ್ಮ, ನಾಗಮ್ಮ, ಪದ್ಮಾವತಿ ಮತ್ತು ನಾನು ಜಗದೇವಿ ಇರುತ್ತೇನೆ, ನನ್ನ ಅಕ್ಕ ಶರಣಮ್ಮ ಈಗ ಮೃತ ಪಟ್ಟಿರುತ್ತಾಳೆ. ಶರಣಮ್ಮ ಇವಳನ್ನು ಗುಲ್ಬರ್ಗಾಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ, ಆಕೆಯ ಗಂಡನ ಹೆಸರು ನನಗೆ ಗೊತ್ತಿಲ್ಲ. ನಾಗಮ್ಮ ಇವಳನ್ನು ಚಿಂಚೋಳಿ ತಾಲೂಕಿನ ಚಿಮ್ಮಚೋಳ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತೇವೆ, ಆಕೆಯ ಗಂಡನ ಹೆಸರು ನನಗೆ ಗೊತ್ತಿಲ್ಲ. ಶರಣಮ್ಮ ಇವಳಿಗೆ ಮಕ್ಕಳು ಇರುವುದಿಲ್ಲ, ನಾಗಮ್ಮ ಇವಳಿಗೆ ಮೂರು ಜನ ಮಕ್ಕಳು ಇರುತ್ತಾರೆ.

ಎದುರುದಾರರು ಮದುವೆಯನ್ನು ಮಾಡಿ ಕೊಟ್ಟಿರುವುದಿಲ್ಲ, ಮದುವೆ ಖರ್ಚನ್ನು ನಾನು ವಹಿಸಿಕೊಂಡಿರುತ್ತೇನೆ. ಮದುವೆ ಆಮಂತ್ರನ ಪತ್ರದಲ್ಲಿ ಶಾಂತಕುಮಾರ ಇತನೇ ಮದುವೆ ವಹಿಸಿಕೊಂಡ ಬಗ್ಗೆ ಇರುತ್ತದೆ ಎಂದರೆ ಸರಿಯಲ್ಲ. ವರದಕ್ಷಿಣೆ ಕೊಡುವುದು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸಾಕ್ಷಿಯು ಮದುವೆ ವೇಳೆಯಲ್ಲಿ 2 ತೊಲಾ ಬಂಗಾರ, 2 ಲಕ್ಷ ಹಣ ಮತ್ತು ಮದುವೆ ಮಾಡಿ ಕೊಟ್ಟಿರುತ್ತೇನೆ. ಮದುವೆ ನಂತರ ನನ್ನ ಮಗಳು ಗಂಡನ ಮನೆಯಲ್ಲಿ ಇದ್ದಳು. ನನ್ನ ಮಗಳು 1 ವರ್ಷದ ವರೆಗೂ ಗಂಡನ ಮನೆಯಲ್ಲಿ ಇದ್ದಳು.

ಗರ್ಭಿಣಿಯಾದ ನಂತರ ನನ್ನ ಮಗಳಿಗೆ ಎದುರುದಾರರ ಕುಟುಂಬ ತ್ರಾಸ ಕೊಡುವುದರಿಂದ ನಾನು ಅವಳನ್ನು ಕುರಿಹಳ್ಳ ಗ್ರಾಮದಲ್ಲಿ ನನ್ನ ಜೊತೆಯಲ್ಲಿ ಇಟ್ಟುಕೊಂಡಿದ್ದೆ. ಬಾಣಂತಿಯಾದ ನಂತರ ಗಂಡನ ಮನೆಗೆ ನಾನು ಕಳಿಸಿಕೊಟ್ಟಿರುತ್ತೇನೆ, ಮಗಳನ್ನು ಗಂಡನ ಮನೆ ಕಳಿಸಿಕೊಟ್ಟಿದ ತಾರೀಖು ನನಗೆ ನೆನಪಿಲ್ಲ. ನನ್ನ ಮಗಳು ಒಂದು ವಾರದ ವರೆಗೂ ಗಂಡನ ಮನೆಯಲ್ಲಿ ಇದ್ದಳು, ಎದುರುದಾರರು ತ್ರಾಸ ಕೊಡುವುದರಿಂದ ನಾನು ಅವಳನ್ನು ಕರೆದುಕೊಂಡು ಬಂದಿರುತ್ತೇನೆ. ಎದುರುದಾರರು ನನ್ನ ಮಗಳಿಗೆ ತ್ರಾಸ ಕೊಟ್ಟಿರುತ್ತಾರೆ ಎಂದು ದೂರನ್ನು ಕೊಟ್ಟಿರುವುದಿಲ್ಲ. ನಾನು ಶಹಾಪೂರಕ್ಕೆ ಕರೆದುಕೊಂಡು ಬಂದ ನಂತರ ದೂರನ್ನು ಕೊಟ್ಟಿರುವುದಿಲ್ಲ. ಪಂಚಾಯಿತಿ ನಡೆದಾಗ ಶಾಂತಕುಮಾರ ಕಡೆಯಿಂದ ಅವರ ತಂದೆ-ತಾಯಿ, ಚಿಕ್ಕಪ್ಪಂದಿರು ಬಂದಿದ್ದರು ಅವರ ಹೆಸರು ನನಗೆ ಈ ನೆನಪಿಲ್ಲ. ನನ್ನ ಕಡೆಯಿಂದ ನಾನು, ನನ್ನ ಮಕ್ಕಳು ಸಂತೋಷ, ಜ್ಯೋತಿ ಇದ್ದರು. ನನ್ನ ಕಡೆಯಿಂದ ಹಿರಿಯರು ಬಂದಿರಲಿಲ್ಲ. ನ್ಯಾಯಾ ಪಂಚಾಯಿತಿ ನಡೆದ ದಿನಾಂಕ ನನಗೆ ನೆನಪಿಲ್ಲ. ಮತ್ತೊಮ್ಮೆ ನ್ಯಾಯ ಪಂಚಾಯಿತಿ ಗಂಡನ ಮನೆಯಲ್ಲಿ ನಡೆದಿತ್ತು ಆಗ ನನ್ನ ಮಗಳು ಮತ್ತು ನಾನು ಮಾತ್ರ ಇದ್ದೇವು. ಎದುರುದಾರರ ಕಡೆಯಿಂದ ಅವರ ತಂದೆ-ತಾಯಿ, ತಮ್ಮ ಮತ್ತು ಎದುರುದಾರರು ಇದ್ದರು. ನ್ಯಾಯಾ ಪಂಚಾಯಿತಿಯಲ್ಲಿ ಸಂಧಾನ ಆಗದೇ ಇದಿದ್ದರಿಂದ ಮತ್ತು ನನ್ನ ಮಗಳಿಗೆ ಹೊಡೆದಿದ್ದರಿಂದ ದೂರನ್ನು ಕೊಡಲು ಕಲಬುರಗಿ ಎಸ್ ಪಿ ಆಫೀಸಗೆ ಹೋಗಿರುತ್ತೇವೆ. ಎಸ್ ಪಿ ಆಫೀನಲ್ಲಿ ನನಗೆ ಮಹಿಳಾ ಪೊಲೀಸ್ ಠಾಣೆಗೆ ಹೋಗು ಎಂದು ಹೇಳಿದಾಗ ನಾನು ಮಹಿಳಾ ಪೊಲೀಸ್ ಠಾಣೆ ಹೋದಾಗ ಅವರು ದೂರನ್ನು ಸ್ವೀಕರಿಸಲಿಲ್ಲ. ಠಾಣೆಗೆ ಹೋದ ದಿನಾಂಕ ನನಗೆ ಈಗ ನೆನಪಿಲ್ಲ. ಮಹಿಳಾ ಠಾಣೆ ಯಾವ ಏರಿಯಾದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಂತರ ಶಹಾಪೂರಕ್ಕೆ ಬಂದ ಮೇಲೆ ದೂರನ್ನು ಕೊಟ್ಟಿರುವುದಿಲ್ಲ.

Computer Institution ಶಾಂತಕುಮಾರ ಇತನದ್ದು ಇತ್ತು. Computer Institution ಯಾವಾಗ ಹಾಕಿದ್ದರು ಎಂದು ನನಗೆ ನೆನಪಿಲ್ಲ. Computer Institution ಶಾಂತ ಕುಮಾರ ಇತನು ನಡೆಸುತ್ತಿದ್ದ ಎಂದರೆ ಸರಿ. 2010 ರಲ್ಲಿ ನನ್ನ ಮಗಳ ಮದುವೆ ಆಗಿರುತ್ತದೆ ಎಂದರೆ ಸರಿ. 2009 ರಲ್ಲಿ ಶಾಂತಕುಮಾರ ಇತನು Computer Institution ಹಾಕಿದ್ದ ಎಂದರೆ ಸಾಕ್ಷಿಯು ಮದುವೆ ಆದ ನಂತರ

ಹಾಕಿರುತ್ತಾನೆ ಎಂದು ನುಡಿದಿರುತ್ತಾರೆ. ನಾನು ಈಗ ಮೆಮೋರಂಡಮ್ ಆಫ್ ಅಗ್ರಿಮೇಂಟ್ ನೋಡುತ್ತಿದ್ದು ಅದರ ಮೇಲೆ ನನ್ನ ಮಗಳ ಸಹಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೆಮೋರಂಡಮ್ ಆಪ್ ಅಗ್ರಿಮೇಂಟ್ ಯಾರು ಯಾವ ವಿಷಯಕ್ಕೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಶಾಂತಕುಮಾರ ಇತನ Computer Institution ಇದಿದ್ದರಿಂದ ಆತ ಹಣವನ್ನು ತಗೆದುಕೊಂಡು ಹೋಗುತ್ತಿದ್ದ ಎಂದರೆ ಸರಿ. ಹೊಡೆ ಬಡಿ ಮಾಡಿ Institution ನಿಂದ ಬಂದ ಹಣವನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆ ಎದುರುದಾರರ ತಂದೆ ಹೆಸರಲ್ಲಿ ಇದೆ. ಜಮೀನಿನಿಂದ ವಾರ್ಷಕ ಆಧಾಯ 2-3 ಲಕ್ಷ ಇರುತ್ತದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರ ತಂದೆ ಹೆಸರಲ್ಲಿ ಇದ್ದಂತಹ 2 ಎಕರೆ ಜಮೀನು ನಾಲ್ಕು ಭಾಗ ಆಗಬೇಕು ಎಂದರೆ ಸರಿಯಲ್ಲ. ನನ್ನ ಮಗಳು ಒಂದು ಪ್ಲಾಟನ್ನು ಖರೀದಿಸಿರುತ್ತಾಳೆ ಎಂದರೆ ಸರಿಯಲ್ಲ. ಜ್ಯೋತಿ ತಂದೆ ಶಿವುಕುಮಾರ ನನ್ನ ಮಗಳ ಎಂದರೆ ಸರಿ. ನನ್ನ ಮಗಳು ಮರಿಗೌಡ ತಂದೆ ಮಲ್ಲಣ್ಣ ಕಲ್ಲಲ್ಮ್ ಇವರ ಕಡೆಯಿಂದ ಖೀರಿದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ಪಂಚಾಯಿತಿ ಒಳಗೆ ಕೊಟ್ಟು ಮುಟೇಶನ್ ಮಾಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

ನನ್ನ ಮಗಳ ಹತ್ತಿರ ಕಾರು ಇರುವುದಿಲ್ಲ. ಜ್ಯೋತಿ ತಂದೆ ಶಿವುಕುಮಾರ ಜೇವರ್ಗಿ ಇವರ ಹೆಸರಲ್ಲಿ ಕಾರ ಇರುತ್ತದೆ ಎಂದರೆ ಸರಿಯಲ್ಲ. ಕುರಿಹಾಳ ನಿವಾಸಿದವರು ಎಂದು ತೋರಿಸಿ ಕಾರನ್ನು ಖೀರಿದಿಸಿರುತ್ತಾಳೆ ಎಂದರೆ ಸರಿಯಲ್ಲ. ಕಾರ ನಂ. ಕೆಎ-33-ಎಂ-9372 ಇರುತ್ತದೆ ಎಂದರೆ ಸರಿಯಲ್ಲ. ಪ್ಲಾಟನ್ನು ಖೀರಿದಿ ಮಾಡಿ ನೆಲ ಮಹಡಿ ಮನೆಯನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈಗ ಮೊದಲನೇ ಮಹಡಿ ಮನೆ ಕಟ್ಟುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗಳು ಮಹಿಳಾ ಸಂಘದಲ್ಲಿ ಕೆಲಸ ಮಾಡುವುದಿಲ್ಲ. ಯಾದಗಿರಿ ನ್ಯಾಯಾಲಯದ ಪಕ್ಕದಲ್ಲಿ ಇದ್ದಂತಹ ಮಹಿಳಾ ಸಂಘದಲ್ಲಿ ಕೆಲಸ ಮಾಡುತ್ತಾಳೆ ಎಂದರೆ ಸರಿಯಲ್ಲ.

9901034405 ನನ್ನ ಮೊಬೈಲ ನಂಬರ ಇರುತ್ತದೆ ಎಂದರೆ ಸರಿ. ಬ್ಯಾಂಕಿನಲ್ಲಿ ಮೂರು ಸಂಘಗಳನ್ನು ನೋಂದಣಿ ಮಾಡಿಸಿ ಈ ಮೊಬೈಲ ನಂಬರನ್ನು ಕೊಟ್ಟಿರುತ್ತೇವೆ ಎಂದರೆ ಸಾಕ್ಷಿಯು ನಾನು ಕೊಟ್ಟಿರುವುದಿಲ್ಲ ಯಾರೋ ಕೊಟ್ಟಿರಬಹುದು ಎಂದು

ನುಡಿದಿರುತ್ತಾರೆ. ಭಾಗ್ಯವಂತಿ ಮಹಿಳಾ ಸಂಘ, ಎಲ್ಲಯ್ಯ ಮಹಿಳಾ ಸಂಘಗಳ ಹಣದ ವ್ಯವಹಾರ ನನ್ನ ಮಗಳು ನೋಡಿಕೊಳ್ಳುತ್ತಾಳೆ ಎಂದರೆ ಸರಿಯಲ್ಲ. ನನ್ನ ಅಂಗನವಾಡಿ ಕಚೇರಿಯಿಂದ ಈ ಸಂಘಗಳನ್ನು ಮಾಡಲಿಕ್ಕೆ ನಿರ್ದೇಶನ ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಇರಲಿಲ್ಲ ಎಂದು ನುಡಿದಿರುತ್ತಾರೆ. ಜ್ಯೋತಿ ತಂದೆ ಶಿವುಕುಮಾರ ಭಾಗ್ಯವಂತಿ ಮಹಿಳಾ ಸಂಘದಲ್ಲಿ ಸದ್ಯರು ಆಗಿದ್ದಾರೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಮಗಳು ತೆರಿಗೆ ಕಟ್ಟುತ್ತಾಳೆ ಎಂದರೆ ಸರಿಯಲ್ಲ. ನಾನು ಬಂಗಾರ, ಹಣ, ಮನೆ ಬಳಕೆ ಸಾಮಾನುಗಳು ಕೊಟ್ಟಿರುವುದಿಲ್ಲ, ಮದುವೆ ಖರ್ಚನ್ನು ವಹಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಹೊಡಿ ಬಡಿ ಮಾಡಿ ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ.**
**ಶಹಾಪೂರ**